**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ-೫೮೩ ೨೭೬**

**ಡಿಸೆಂಬರ್ ೦೭, ೨೦೨೨ರ ಬುಧವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೫ನೇ (ವಿಶೇಷ) ಸಭೆಯ ನಡವಳಿಗಳು**

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೪. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೫. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೬. ಶ್ರೀ ಜೈಭೀಮ್ ಆರ್.ಕಟ್ಟಿ, ಕಲಬುರಗಿ | : ಸದಸ್ಯರು |
| ೦೭. ಡಾ. ಓ. ಓಬಯ್ಯ, ಬೆಂಗಳೂರು | : ಸದಸ್ಯರು |
| ೦೮. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೦೯. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೦. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೧. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೩. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೪. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೬. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಆರಂಭದಲ್ಲಿ ಸಭೆಗೆ ಸ್ವಾಗತಿಸಿದರು. ನಂತರ ಇತ್ತೀಚೆಗೆ ನಿಧನರಾದ ಡಾ. ಸಿ.ಎಸ್. ವಾಸುದೇವನ್, ಪ್ರಾಧ್ಯಾಪಕರು/ಡೀನ್, ಸಮಾಜ ವಿಜ್ಞಾನಗಳ ನಿಕಾಯ ಅವರ ಆತ್ಮಕ್ಕೆ ಶಾಂತಿ ಕೋರಿ ಸಭೆ ಸಂತಾಪ ಸೂಚಿಸಿತು. ನೂತನವಾಗಿ ಸಮಾಜ ವಿಜ್ಞಾನಗಳ ನಿಕಾಯದ ಡೀನ್‌ರಾಗಿ ನೇಮಕಗೊಂಡ ಡಾ. ಚಲುವರಾಜು ಅವರನ್ನು ಸಭೆ ಅಭಿನಂದಿಸಿತು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೦೭.೦೯.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೪ನೇ (ತುರ್ತು) ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೦೭.೦೯.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿ ೨೧೪ನೇ (ತುರ್ತು) ಸಭೆಯ ನಡವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೦೭.೦೯.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೪ನೇ (ತುರ್ತು) ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೦೭.೦೯.೨೦೨೨ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೪ನೇ (ತುರ್ತು) ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡಿತು.

೨೧೫.೦೧ ೩೧ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ವಿದ್ಯಾರ್ಥಿಗಳು ಪಡೆಯುವ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಅನುಮೋದನೆ ಕುರಿತು.

ಟಿಪ್ಪಣಿ : ದಿನಾಂಕ ೦೮.೧೨.೨೦೨೨ರಂದು ನಡೆಯಲಿರುವ ೩೧ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ವಿದ್ಯಾರ್ಥಿಗಳು ಪಡೆಯುವ ಈ ಕೆಳಗಿನ ವಿವಿಧ ಕೋರ್ಸ್‌ಗಳ ಒಟ್ಟು ೩೨೧ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

| | |
|---|---|
| ೧. ಡಿ.ಲಿಟ್. | ೧ |
| ೨. ಪಿಎಚ್.ಡಿ. | ೧೩೬ |
| ೩. ಎಂ.ಫಿಲ್ | ೨೩ |
| ೪. ಎಂ.ಎ.ಪಿಎಚ್.ಡಿ. (ಕನ್ನಡ ಸಾಹಿತ್ಯ) | ೩೫ |
| ೫. ಎಂ.ಎ(ಮಹಿಳಾ ಅಧ್ಯಯನ) | ೦೨ |
| ೬. ಎಂ.ಎ(ಗ್ರಾಮೀಣಾಭಿವೃದ್ಧಿ) | ೩ |
| ೭. ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ೧೧ |
| ೮. ಎಂ.ವಿ.ಎ (ಚಿತ್ರಕಲೆ) | ೧೭ |
| ೯. ಎಂ.ಮ್ಯೂಜಿಕ್ (ಹಿಂದೂಸ್ತಾನಿ ಗಾಯನ) | ೫ |
| ೧೦. ಬಿ.ಮ್ಯೂಜಿಕ್ (ಹಿಂದೂಸ್ತಾನಿ ಗಾಯನ) | ೧೪ |
| ೧೧. ಎಂ.ಎಸ್‌ಸಿ ಯೋಗ | ೮ |
| ೧೨. ಭಾಷಾಂತರ ಸ್ನಾತಕೋತ್ತರ ಡಿಪ್ಲೊಮಾ | ೩ |
| ೧೩. ಶಾಸನಶಾಸ್ತ್ರ ಸ್ನಾತಕೋತ್ತರ ಡಿಪ್ಲೊಮಾ | ೧೦ |
| ೧೪. ಮಾನವಶಾಸ್ತ್ರ ಸ್ನಾತಕೋತ್ತರ ಡಿಪ್ಲೊಮಾ | ೯ |
| ೧೫. ಪತ್ರಿಕೋದ್ಯಮ ಸ್ನಾತಕೋತ್ತರ ಡಿಪ್ಲೊಮಾ | ೫ |
| ೧೬. ಪುರಾತತ್ವ, ವಸ್ತುಸಂಗ್ರಹಾಲಯಶಾಸ್ತ್ರ ಮತ್ತು ಪ್ರವಾಸೋದ್ಯಮ ಸ್ನಾತಕೋತ್ತರ ಡಿಪ್ಲೊಮಾ | ೧೨ |
| ೧೭. ಯೋಗ ಅಧ್ಯಯನ ಸ್ನಾತಕೋತ್ತರ ಡಿಪ್ಲೊಮಾ | ೨೨ |
| ೧೮. ಯೋಗ ಸರ್ಟಿಫಿಕೇಟ್ ಕೋರ್ಸ್ | ೫ |
| ಒಟ್ಟು | ೩೨೧ |

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಮೇಲಿನ ವಿವಿಧ ಕೋರ್ಸ್‌ಗಳ ಒಟ್ಟು ೩೨೧ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಅನುಮೋದನೆ ನೀಡಿತು.

೨೧೫.೦೨ ೩೧ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣ ಕೇಂದ್ರದ ಬಿ.ವಿ.ಎ. ಪದವಿ ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳು ಪಡೆಯುವ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಅನುಮೋದನೆ ಕುರಿತು.

ಟಿಪ್ಪಣಿ : ದಿನಾಂಕ ೦೮.೧೨.೨೦೨೨ರಂದು ನಡೆಯಲಿರುವ ೩೧ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣ ಕೇಂದ್ರದ ೨೦೨೧–೨೨ನೇ ಸಾಲಿನ ವಿದ್ಯಾರ್ಥಿಗಳು ಪಡೆಯುವ ಈ ಕೆಳಗಿನ ವಿವಿಧ ಕೋರ್ಸ್‌ಗಳ ಒಟ್ಟು ೫೧೬ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

| | |
|---|---|
| ೧. ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್, ಚಿತ್ರಕಲೆ ಅಂತಿಮ | ೩೭೮ |
| ೨. ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್, ಅನ್ವಯಿಕ ಕಲೆ ಅಂತಿಮ | ೫೯ |
| ೩. ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್, ಶಿಲ್ಪಕಲೆ ಅಂತಿಮ | ೨ |
| ೪. ೫ನೇ ವರ್ಷದ ವಿಶೇಷ ಪರಿಣಿತಿ ಡಿಪ್ಲೊಮಾ | ೭೭ |
| ಒಟ್ಟು | ೫೧೬ |

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಮೇಲಿನ ವಿವಿಧ ಕೋರ್ಸ್‌ಗಳ ಒಟ್ಟು ೫೧೬ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಅನುಮೋದನೆ ನೀಡಿತು.

೨೧೫.೦೩ ೩೧ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ದೂರಶಿಕ್ಷಣ ನಿರ್ದೇಶನಾಲಯದ ವಿದ್ಯಾರ್ಥಿಗಳು ಪಡೆಯುವ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಅನುಮೋದನೆ ಕುರಿತು.

ಟಿಪ್ಪಣಿ : ದಿನಾಂಕ ೦೪.೧೨.೨೦೨೨ರಂದು ನಡೆಯಲಿರುವ ೩೧ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ದೂರಶಿಕ್ಷಣ ನಿರ್ದೇಶನಾಲಯದ ೨೦೧೯-೨೦ನೇ ಸಾಲಿನ ವಿದ್ಯಾರ್ಥಿಗಳು ಪಡೆಯುವ ಈ ಕೆಳಗಿನ ವಿವಿಧ ಕೋರ್ಸ್‌ಗಳ ಒಟ್ಟು ೩೦೩ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

| ಎಂ.ಎ. ಸ್ನಾತಕೋತ್ತರ ಪದವಿ | | ಡಿಪ್ಲೊಮ ಕೋರ್ಸ್ | |
|---|---|---|---|
| ೧. ಎಂ.ಎ. ಕನ್ನಡ | ೯೫ | ೧. ಪುರಾತತ್ವ ಡಿಪ್ಲೊಮಾ | ೦೪ |
| ೨. ಎಂ.ಎ. ಚರಿತ್ರೆ | ೧೦೩ | ೨. ಪತ್ರಿಕೋದ್ಯಮ ಡಿಪ್ಲೊಮಾ | ೦೯ |
| ೩. ಎಂ.ಎ. ಸಮಾಜಶಾಸ್ತ್ರ | ೬೬ | ೩. ನಾಟಕ ಕಲೆ ಡಿಪ್ಲೊಮಾ | ೧೬ |
| ೪. ಎಂ.ಜೆ.ಎಂ.ಸಿ.(ಎಂ.ಎ. ಪತ್ರಿಕೋದ್ಯಮ) | ೧೦ | | |
| ಒಟ್ಟು | ೨೭೪ | ಒಟ್ಟು | ೨೯ |

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಮೇಲಿನ ವಿವಿಧ ಕೋರ್ಸ್‌ಗಳ ಒಟ್ಟು ೩೦೩ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೧೫.೦೪ ವಿಜಯನಗರ ಜಿಲ್ಲೆಯಲ್ಲಿ ನೂತನ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲು ಜಿಲ್ಲಾಧಿಕಾರಿಗಳು ಕನ್ನಡ ವಿಶ್ವವಿದ್ಯಾಲಯದ ನಾಲ್ಕು ಎಕರೆ ಜಮೀನು ಕೇಳಿರುವ ಬಗ್ಗೆ.

ಟಿಪ್ಪಣಿ : ವಿಜಯನಗರ ಜಿಲ್ಲೆಯಲ್ಲಿ ನೂತನ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಕನ್ನಡ ವಿಶ್ವವಿದ್ಯಾಲಯದ ನಾಲ್ಕು ಎಕರೆ ಜಮೀನು ನೀಡಬೇಕೆಂದು ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ಇವರು ದಿನಾಂಕ ೨೦.೧೦.೨೦೨೨ರಂದು ಪತ್ರ ನೀಡಿರುತ್ತಾರೆ. ಈ ಕುರಿತು ಕಾರ್ಯಕಾರಿ ಸಮಿತಿಯ ನಿರ್ದೇಶನ ಕೋರಿದೆ.

ನಿರ್ಣಯ : ಪ್ರಸ್ತುತ ವಿಷಯವನ್ನು ಪರಿಶೀಲಿಸಿದ ಕಾರ್ಯಕಾರಿ ಸಮಿತಿ ಸಭೆಯು ನೂತನ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಕನ್ನಡ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಜಮೀನನ್ನು ನೀಡಲು ಸಾಧ್ಯವಾಗದು ಎಂದು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ತಿಳಿಸಲು ತೀರ್ಮಾನಿಸಿತು.

೨೧೫.೦೫ ದಿ. ಬಿ. ಪಂಪಾಪತಿ, ತೋಟಮಾಲಿ ಇವರ ಮಗನಿಗೆ ಅನುಕಂಪ ಹುದ್ದೆ ನೀಡುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದಲ್ಲಿ ತೋಟಮಾಲಿ ಆಗಿ ಕಾರ್ಯನಿರ್ವಹಿಸುತ್ತಿದ್ದ ಬಿ. ಪಂಪಾಪತಿ ಇವರು ದಿನಾಂಕ ೧೧.೦೪.೨೦೨೨ರಂದು ಅಕಾಲಿಕ ಮರಣವನ್ನು ಹೊಂದಿರುತ್ತಾರೆ. ಇವರ ಮಗನಾದ ಶ್ರೀ ಜೀನೂರು ನಿಂಗಪ್ಪ ಅವರು ಅನುಕಂಪ ಹುದ್ದೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಪೂರಕವಾದ ಅಗತ್ಯ ದಾಖಲೆಗಳನ್ನು ದೃಢೀಕರಿಸಿ ಸಲ್ಲಿಸಿದ್ದಾರೆ. ಸದರಿಯವರಿಗೆ ಅನುಕಂಪ ಆಧಾರಿತ ಹುದ್ದೆ ನೀಡಲು ಅನುಮೋದನೆಗೆ ಸಲ್ಲಿಸಿದೆ.

ನಿರ್ಣಯ : ಸದರಿ ವಿಷಯ ಕುರಿತು ಸಭೆಯು ಪರಿಶೀಲಿಸಿ, ದಿವಂಗತ ಬಿ. ಪಂಪಾಪತಿ, ಇವರ ಅವಲಂಬಿತ ಕುಟುಂಬದ ಸದಸ್ಯರಾದ ದಿವಂಗತರ ಮಗ ಶ್ರೀ ಜೀನೂರು ನಿಂಗಪ್ಪ ಅವರನ್ನು ನಿಯಮಾನುಸಾರ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಗೆ ಅನುಮೋದನೆ ನೀಡಿತು.

೨೧೫.೦೬ ಡಾ. ಜಯದೇವಿ ಜಂಗಮಶೆಟ್ಟಿ ಇವರನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಖಾಯಂ ಬಿಡುಗಡೆಗೊಳಿಸುವ ಬಗ್ಗೆ.

ಟಿಪ್ಪಣಿ : ಸಂಗೀತ ಮತ್ತು ನೃತ್ಯ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಡಾ. ಜಯದೇವಿ ಜಂಗಮಶೆಟ್ಟಿ ಇವರು ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿ, ಅಲ್ಲಿಯೇ ಮುಂದುವರೆಯುವುದಾಗಿ ತಿಳಿಸಿ ಲೀನ್ ಅವಧಿಯನ್ನು ಕೊನೆಗೊಳಿಸಲು ವಿನಂತಿಸಿ ದಿನಾಂಕ ೦೨.೦೨.೨೦೨೨ರಂದು ಪತ್ರ ಬರೆದಿರುವುದನ್ನು ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವರು ಕನ್ನಡ ವಿಶ್ವವಿದ್ಯಾಲಯಕ್ಕೆ ದಿನಾಂಕ ೧೯.೦೪.೨೦೨೨ರಂದು ಅಧಿಕೃತವಾಗಿ ಪತ್ರ ಬರೆದಿರುತ್ತಾರೆ. ಆದ್ದರಿಂದ ಅವರ ವೈಯಕ್ತಿಕ ಕೋರಿಕೆಯಂತೆ ಕನ್ನಡ ವಿಶ್ವವಿದ್ಯಾಲಯದಿಂದ ಬಿಡುಗಡೆಗೊಂಡ ದಿನಾಂಕ ೨೩.೧೧.೨೦೧೯ರಿಂದ ಪೂರ್ವಾನ್ವಯಗೊಳಿಸಿ ಆದೇಶ ಹೊರಡಿಸಲು ಕಾರ್ಯಕಾರಿ ಸಮಿತಿ ಅನುಮೋದನೆಗೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿ ಡಾ. ಜಯದೇವಿ ಜಂಗಮಶೆಟ್ಟಿ ಇವರ ಲೀನ್ ಅವಧಿಯನ್ನು ಕೊನೆಗೊಳಿಸುವ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.

೨೧೫.೦೭ ಶ್ರೀಮತಿ ಚಿತ್ರಕಲಾ ಹೆಚ್.ಡಿ., ಕಿರಿಯ ಸಹಾಯಕರ ಹುದ್ದೆ ಸಮೇತ ವರ್ಗಾವಣೆಗೊಳಿಸುವ ಕುರಿತು.

ಟಿಪ್ಪಣಿ : ಕಿರಿಯ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಚಿತ್ರಕಲಾ ಹೆಚ್.ಡಿ. ಇವರನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಕಿರಿಯ ಸಹಾಯಕ ಹುದ್ದೆಯ ಸಮೇತ ವರ್ಗಾವಣೆಗೊಳಿಸಲು ಕನ್ನಡ ವಿಶ್ವವಿದ್ಯಾಲಯದ ಅಭಿಪ್ರಾಯ ಕೋರಿ ಉನ್ನತ ಶಿಕ್ಷಣ ಇಲಾಖೆಯು ಪತ್ರ ಸಂ. ಇಡಿ೩೮ ಯುಜಿವಿ೨೦೨೨ ದಿನಾಂಕ ೨೯.೦೯.೨೦೨೨ರಂದು ಪತ್ರವನ್ನು ಬರೆದಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ ಮತ್ತು ಪರಿನಿಯಮಗಳಲ್ಲಿ ಹುದ್ದೆಯ ಸಮೇತ ವರ್ಗಾವಣೆಗೊಳಿಸುವ ಬಗ್ಗೆ ಅವಕಾಶಗಳಿಲ್ಲ. ಈ ಕುರಿತು ಉನ್ನತ ಶಿಕ್ಷಣ ಇಲಾಖೆಗೆ ಸ್ಪಷ್ಟ ಅಭಿಪ್ರಾಯ ನೀಡಲು ಕಾರ್ಯಕಾರಿ ಸಮಿತಿಯ ಅನುಮೋದನೆಗೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಪರಿಶೀಲಿಸಿ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಹುದ್ದೆ ಸಮೇತ ವರ್ಗಾವಣೆಗೊಳಿಸಲು ಸಾಧ್ಯವಿಲ್ಲವೆಂದು ಸಭೆಯು ತೀರ್ಮಾನಿಸಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು